ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./pers/844

ದಿನಾಂಕ : 16/03/2022

**ಸಿಬ್ಬಂದಿ ಪ್ರಕಟಣೆ ಸಂಖ್ಯೆ** – 1024

ಸಂಸ್ಥೆಯ ನಿರ್ದೇಶಕ ಮಂಡಳಿಯು ಸಂಸ್ಥೆಯ ಉದ್ಯೋಗಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಹಬ್ಬದ ಮುಂಗಡದ ಮೊತ್ತವನ್ನು **ದಿ:15.02.2022** ರಂದು ನಡೆದ ಸಭೆಯಲ್ಲಿ ₹.10,000/- ಗಳಿಂದ **₹.25,000/-** ಗಳಿಗೆ ಹೆಚ್ಚಿಸಲು ಅನುಮೋದಿಸಿರುತ್ತದೆ ಎಂಬ ಅಂಶವನ್ನು ತಿಳಿಸಲು ಹರ್ಷಿಸುತ್ತೇವೆ. ಈ ಪರಿಷ್ಕೃತ ಮುಂಗಡ ಸೌಲಭ್ಯವನ್ನು ದಿ:15.02.2022 ರಿಂದ ಅನ್ವಯವಾಗುತ್ತದೆ. ಈ ಪರಿಷ್ಕೃತ ಮುಂಗಡ ಹಣವನ್ನು ವಾರ್ಷಿಕ ವರ್ಷದಲ್ಲಿ ಒಂದು ಬಾರಿ ಮಾತ್ರ ನಿಗದಿತ ಅರ್ಜಿಯನ್ನು ಸಲ್ಲಿಸಿ ಪಡೆಯಬಹುದಾಗಿರುತ್ತದೆ.

ಮಂಜೂರು ಮಾಡುವ ಮುಂಗಡ ಹಣವು ಉದ್ಯೋಗಿಯ ಮೂಲ ವೇತನದ ಶೇ.75% ರಷ್ಟು ಅಥವಾ ಈ ಮೊತ್ತ ₹.25,000/- ಗಳಿಗೆ ಮೀರಿದಂತಿರುತ್ತದೆ.

ಸಂಸ್ಥೆಯಲ್ಲಿ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುವ ವಿಶೇಷ ತಹಸೀಲ್ದಾರ್ ಹಾಗೂ ರಾಜಸ್ವ ನಿರೀಕ್ಷಕರು ಸಂಸ್ಥೆಯಿಂದ ಹಬ್ಬದ ಮುಂಗಡವನ್ನು ಪಡೆಯಲು ಅರ್ಹರಿರುವುದಿಲ್ಲ.

ಪ್ರಸ್ತುತ ಜಾರಿಯಲ್ಲಿರುವ ಹಬ್ಬದ ಮುಂಗಡದ ಸುತ್ತೋಲೆಯ ಷರತ್ತುಗಳಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

15/03/22
ಕಾರ್ಯ ನಿರ್ವಾಹಕ ನಿರ್ದೇಶಕರು

ಗೆ,

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ,
ಎಲ್ಲಾ ಶಾಖಾ ಕಛೇರಿಗಳಿಗೆ,
ಆಲೆಪ ಕೋಶ, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲಬುರಗಿ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ,
ಕಾರ್ಯ ನಿರ್ವಾಹಕ ನಿರ್ದೇಶಕರುಗಳಿಗೆ
ವ್ಯ.ನಿ. ರವರ ಆಪ್ತ ಕಾರ್ಯದರ್ಶಿಯವರಿಗೆ –ಮಾಹಿತಿಗಾಗಿ.

ಅಧ್ಯಕ್ಷರು, ಕರಾಹಸಂ ನೌಕರರ / ಅಧಿಕಾರಿಗಳ / ಪ.ಜಾ & ಪ.ಪಂ ನೌಕರರ ಸಂಘ,
ಪ್ರಧಾನ ಕಛೇರಿ, ಗ್ರಂಥಾಲಯ / ಸೂಚನಾ ಫಲಕಕ್ಕೆ, ಕಛೇರಿ ಪ್ರತಿ.